KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

---------------------------------------------------------------------------

APP for State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

---------------------------------------------------------------------------

Offence punishable under : SEC.314. of INDIAN PENAL CODE,

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No:2/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ನಾಗರಾಜ | ಪ್ರಾ.ಸಾ.- 02 |
| ತಂದೆಯ ಹೆಸರು | ಃ | ಹನುಮಂತಪ್ಪ | ಚಾ.ಸಾ.- 02 |
| ವಯಸ್ಸು | ಃ | 38 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | |
| ವಾಸ ಸ್ಥಳ | ಃ | ಸೂರತ್ಕಲ್ | |

**ದಿನಾಂಕಃ 05-09-2022**

**ಪ್ರಮಾಣ ವಚನ ಬೋಧಿಸಲಾಯಿತು.**

**: ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಪ್ರಾಸಾ-1 ಸುರೇಶ ನನ್ನ ಹೆಂಡತಿಯ ತಮ್ಮ, ಮೃತ ನಾಗರತ್ನಳ ತಾಯಿ ನನ್ನ ಹೆಂಡತಿಯ ಅಕ್ಕ, ನಾಗರತ್ನಳಿಗೆ ನಾನು ಚಿಕ್ಕಪ್ಪ ಆಗಬೇಕು.

2. ದಿನಾಂಕಃ 19-02-2019 ರಂದು ನಾಗರತ್ನ ಮೃತಪಟ್ಟಳು. ನಾಗರತ್ನಳಿಗೆ ಹುಷಾರಿಲ್ಲ ಎಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದೇವೆಂದು ಹೇಳಿದ್ದರು, ನನಗೆ ಗೊತ್ತಾಯಿತು. ಶಿವಮೊಗ್ಗದ ಆಸ್ಪತ್ರೆಯ ಶವಾಗಾರದಲ್ಲಿ ನಾಗರತ್ನಳ ಶವ ಇತ್ತು, ಅಲ್ಲಿ ನೋಡಿದೆನು. ಶವ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದರು, ಅದಕ್ಕಿಂತ ಮೊದಲು ನನಗೆ ಕೊಟ್ಟ ನೋಟೀಸ್ ಇದೇ ಇರುತ್ತದೆ, ಅದರಲ್ಲಿರುವ ಸಹಿ ನನ್ನದೇ, ಅವುಗಳನ್ನು ಕ್ರಮವಾಗಿ ನಿ.ಪಿ. 3, ಮತ್ತು 3(ಎ) ಎಂದು ಗುರುತಿಸಲಾಯಿತು.

3. ಶವ ಪಂಚನಾಮೆ ಮಾಡುವ ಕಾಲದಲ್ಲಿ, ನಾನು, ಪ್ರಾಸಾ-1-ಸುರೇಶ, ನಾಗರತ್ನಳ ತಾಯಿ, ಚಾಸಾ-3 ಅನಿಲ್ ಇದ್ದೆವು. ಮೂರುವರೆ ವರ್ಷಗಳ ಹಿಂದೆ ಶವ ಮಹಜರ್ ಮಾಡಿದ್ದು, ಮಧ್ಯಾಹ್ನ 3.00 ಗಂಟೆ ಆಗಿರಬಹುದು. ಆರೋಪಿಯು ನಾಗರತ್ನಳ ಹೊಟ್ಟೆಯಲ್ಲಿ ಮಗು ಇದ್ದದ್ದು ಕರಗಲೆಂದು ಟ್ಯಾಬ್ಲೆಟ್ ಕೊಟ್ಟಿದ್ದನೆಂದು, ಅದರಿಂದ ರಕ್ತ ಬೇದಿ ಆಗಿ ಮೃತಪಟ್ಟಳು ಎಂದು ತಿಳಿದು ಬಂದಿತು. ನನ್ನ ಸಮಕ್ಷಮ ಮಾಡಿದ ಶವ ಪಂಚನಾಮೆ ಇದೇ ಇರುತ್ತದೆ, ಅದರಲ್ಲಿರುವ ಸಹಿ ನನ್ನದೇ, ಅವುಗಳನ್ನು ಕ್ರಮವಾಗಿ ನಿ.ಪಿ. 4 ಮತ್ತು 4(ಎ) ಎಂದು ಗುರುತಿಸಲಾಯಿತು. ನಾಗರತ್ನಳ ಸಾವಿಗೆ ಆರೋಪಿಯೇ ಕಾರಣ ಎಂದು ಅದರಲ್ಲಿ ಬರೆಯಲಾಗಿತ್ತು.

4. ಆ ಮಹಜರ್ ಸಮಯದಲ್ಲಿ ತೆಗೆದ ಫೋಟೋ ಇದೇ ಎಂದು ನಿ.ಪಿ.2 ನ್ನು ನೋಡಿ ಗುರುತಿಸಿರುತ್ತಾರೆ, ಅದರಲ್ಲಿ ಇರುವ ಶವ ನಾಗರತ್ನಳದ್ದೇ. ಅದರಲ್ಲಿ ನಾನು, ಪ್ರಾಸಾ-1-ಸುರೇಶ, ಚಾಸಾ-3-ಅನಿಲ್ ಇದ್ದೇವೆ.

**ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಐ.ಎಸ್.ಟಿ. ವಕೀಲರಿಂದಃ**

5. ದಿನಾಂಕಃ 18-02-2019 ರಂದು ನಿಮಗೆ ಗೊತ್ತಾಯಿತು ಎಂದು ಹೇಳಿದಿರಿ, 19 ನೇ ತಾರೀಖಿನಂದೇ ನೀವು ಶಿವಮೊಗ್ಗಕ್ಕೆ ಹೋದಿರಿ ಇದಕ್ಕಿಂತ ಹಿಂದಿನ ವಿಷಯ ನಿಮಗೇನಾದರೂ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾಗರತ್ನ ಮತ್ತು ಆರೋಪಿ ಪ್ರೀತಿ ಮಾಡುತ್ತಿದ್ದರು ಎಂದು ಹೇಳುತ್ತಿದ್ದರು ಎಂದು ಹೇಳಿರುತ್ತಾರೆ. ಶಿವಮೊಗ್ಗ ಆಸ್ಪತ್ರೆಗೆ ಹೋದಾಗಲೇ ಯಾಕೆ ಹುಷಾರಿಲ್ಲದಂತೆ ಆಯಿತು ಎನ್ನುವ ಬಗ್ಗೆ ತಿಳಿದು ಬಂದದ್ದು. ನಾನು ಆಸ್ಪತ್ರೆಗೆ ಹೋಗುವಷ್ಟರಲ್ಲಿ ನಾಗರತ್ನ ಮೃತಪಟ್ಟಿದ್ದಳು.

6. ಮಹಜರ್ ಗೆ ಸಹಿ ಮಾಡಿದೆ ಎಂದು ಹೇಳಿದಿರಿ, ಅದರಲ್ಲಿ ಏನೇನು ಬರೆದಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ಹುಷಾರಿರಲಿಲ್ಲ ಎಂದು ಹೇಳಿದ್ದರು, ಅಷ್ಟು ಬಿಟ್ಟು ಉಳಿದದ್ದು ಗೊತ್ತಿಲ್ಲ ಎಂದು ಹೇಳಿರುತ್ತಾರೆ. ನಾಗರತ್ನಳ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನಾನೇನು ಕೊಟ್ಟಿಲ್ಲ. ನಿಮ್ಮ ಹೆಂಡತಿಯ ಅಕ್ಕನ ಮಗಳ ಸಾವು ಎಂದು ತಿಳಿದು ಬಂದು ಹೋಗಿದ್ದು ಬಿಟ್ಟರೆ ಮತ್ತೇನು ನಿಮಗೆ ತಿಳಿದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿದಾರರು ನಾಗರತ್ನ ಮತ್ತು ಆರೋಪಿ ಲವ್ ಮಾಡುತ್ತಿದ್ದರು ಎಂದು ಗೊತ್ತಿತ್ತು ಎಂದು ಹೇಳಿರುತ್ತಾರೆ. ಈ ವಿಷಯ ನನಗೆ ಗೊತ್ತಿರಲಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-05-09-2022**

**(ಶುಭ ಗೌಡರ್)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS